

ತಂದಿದೆ. ಸಂಗೀತ, ನೃತ್ಯ, ನಾಟಕ, ಸಾಹಿತ್ಯ, ಜಾನಪದ, ಯಕ್ಷಗಾನ, ಶಿಲ್ಪಕಲೆಗಳು ಇತ್ಯಾದಿ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ದೊರಕುವಂತೆ ಮಾಡಲು ದೃಶ್ಯ ದಾಖಲೆಗೆ ಚಾಲನೆ ನೀಡಿದೆ. ಕನ್ನಡ, ಕಲೆ ಮತ್ತು ಸಂಸ್ಕೃತಿಗೆ ಪ್ರೋತ್ಸಾಹ ನೀಡಲು ಬೆಂಗಳೂರು ನಗರದ ಅರ್ಕಾವತಿ ಬಡಾವಣೆಯಲ್ಲಿ ಆಧುನಿಕ ಸೌಲಭ್ಯ ಹೊಂದಿದ ಕಲಾಭವನ ನಿರ್ಮಿಸಲು ಉದ್ದೇಶಿಸಿದೆ.

ಕನ್ನಡದ ಪ್ರಥಮ ಅಂತರ್ಜಾಲ ವಿಶ್ವಕೋಶ 'ಕಣಜ'ವನ್ನು ಮತ್ತಷ್ಟು ಪರಿಣಾಮಕಾರಿಯಾಗಿಸಲು ಮತ್ತು ನಿರ್ವಹಣೆ ಮಾಡಲು ಬೆಂಗಳೂರಿನಲ್ಲಿ ಇ-ಕನ್ನಡ ವಿಭಾಗವನ್ನು ಕನ್ನಡ ಭವನದಲ್ಲಿ ಪ್ರಾರಂಭಿಸಿದೆ. ತಾತಗುಣಿಯಲ್ಲಿರುವ ರೋರಿಚ್ ಎಸ್ಟೇಟ್‌ನಲ್ಲಿ ಅಂತರರಾಷ್ಟ್ರೀಯ ಮಟ್ಟದ ವಸ್ತು ಸಂಗ್ರಹಾಲಯ ನಿರ್ಮಾಣಕ್ಕಾಗಿ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಬೆಂಗಳೂರಿನಲ್ಲಿ ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ. ಸಂತ ಕವಿ ಕನಕದಾಸರ ಕಾವ್ಯ ಹಾಗೂ ಸಮಗ್ರ ಕೀರ್ತನೆಗಳ ಸಂಶೋಧನೆ ಮತ್ತು ಹಲವು ಭಾಷೆಗಳಿಗೆ ಅನುವಾದದ ಕಾರ್ಯ ಪ್ರಗತಿಯಲ್ಲಿದೆ. ಮೈಸೂರು, ಶಿವಮೊಗ್ಗ ಹಾಗೂ ಧಾರವಾಡಗಳ ಜೊತೆಗೆ ಕಲಬುರಗಿಯಲ್ಲೂ ರಂಗಾಯಣದ ಘಟಕ ಪ್ರಾರಂಭವಾಗಿವೆ.

ಕನ್ನಡಿಗರ ಪ್ರಥಮ ಸ್ವತಂತ್ರ ರಾಜ್ಯ ಕದಂಬರ ರಾಜಧಾನಿಯಾಗಿದ್ದ ಬನವಾಸಿಯ ಸಮಗ್ರ ಅಭಿವೃದ್ಧಿಗಾಗಿ ಬನವಾಸಿ ಅಭಿವೃದ್ಧಿ ಪ್ರಾಧಿಕಾರ ಮತ್ತು ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳನ್ನೊಳಗೊಂಡ ಚಾಲುಕ್ಯ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದೆ. ಹಾಗೆಯೇ, ಕನ್ನಡದ ಆದಿಕವಿ ಪಂಪನ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುತ್ತಿದೆ. ಇವುಗಳ ಜೊತೆಗೆ, ಕೊಂಕಣಿ ಅಧ್ಯಯನ ಪೀಠ, ಶ್ರವಣಬೆಳಗೊಳದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಜೈನ ಶಾಸನಗಳ ಅಧ್ಯಯನ ಪೀಠ ಮತ್ತು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸಿದ್ಧ ಚಿತ್ರ ಕಲಾವಿದ ಪಿ.ಆರ್.ತಿಪ್ಪೇಸ್ವಾಮಿರವರ ಅಧ್ಯಯನ ಪೀಠಗಳನ್ನು ಸ್ಥಾಪಿಸುತ್ತಿದೆ.

ಬೆಂಗಳೂರಿನ ಗಾಂಧೀ ಭವನದಲ್ಲಿರುವ ಗಾಂಧಿ ವಸ್ತು ಸಂಗ್ರಹಾಲಯವನ್ನು ಉನ್ನತೀಕರಿಸಿದೆ. ಇಗಾಂಧಿ ಕಾರ್ಯಕ್ರಮವನ್ನು ಗಣಕೀಕರಿಸಿದೆ. ಗಾಂಧಿ

## ಸಾರ್ವಜನಿಕ ಸಂಪರ್ಕ

ಸರ್ಕಾರ ಮತ್ತು ಜನರ ನಡುವಿನ ಕೊಂಡಿಯಾಗಿ ಕಾರ್ಯನಿರ್ವಹಿಸುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸರ್ಕಾರದ ಜನಪರ ಯೋಜನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಟಿವಿ, ರೇಡಿಯೋ ವಿದ್ಯುನ್ಮಾನ ಮಾಧ್ಯಮ, ಮುದ್ರಣ ಮಾಧ್ಯಮ ಮತ್ತು ಸಾಂಪ್ರದಾಯಿಕ ಮಾಧ್ಯಮಗಳಾದ ಬೀದಿ ನಾಟಕ, ಸಂಗೀತ ನಾಟಕ ಸೇರಿದಂತೆ ನವ್ಯ ಮಾಧ್ಯಮವಾದ ಇಂಟರ್‌ನೆಟ್, ಫೇಸ್‌ಬುಕ್ ಟ್ವೀಟರ್ ಮೂಲಕವೂ ಸರ್ಕಾರದ ಯೋಜನೆಗಳಿಗೆ ಪ್ರಚಾರ ನೀಡುತ್ತದೆ.

ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಜನತೆಗೆ ಮಾಹಿತಿ ನೀಡಲು ಪ್ರಗತಿ ಮಾಹಿತಿ ಹೆಸರಿನಲ್ಲಿ ಕಲಾಜಾಥ, ಸಂಚಾರಿ ಎಲ್‌ಇಡಿ ವಾಹನ, ಬೀದಿ ನಾಟಕ ಮತ್ತು ಸಂಚಾರಿ ವಸ್ತುಪ್ರದರ್ಶನಗಳ ಮೂಲಕ ೧೦ ಸಾವಿರ ಹಳ್ಳಿಗಳಲ್ಲಿ ಪ್ರಚಾರ ಮಾಡಲಾಗಿದೆ. ಮುಖ್ಯಮಂತ್ರಿಗಳೊಂದಿಗೆ ಫಲಾನುಭವಿಗಳೇ ನೇರವಾಗಿ ಸಂವಾದ ನಡೆಸಿದ 'ಜನಮನ' ಕಾರ್ಯಕ್ರಮದ ಆಯೋಜನೆ ರಾಷ್ಟ್ರದಲ್ಲಿಯೇ ಮಾದರಿಯಾಗಿದೆ. ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಂದ ಫಲಾನುಭವಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ನಡೆಸಿಕೊಟ್ಟಿದೆ. ಇಲಾಖೆಯು ನಿರ್ಮಿಸಿದ 'ಬಾರಿಸು ಕನ್ನಡ ಡಿಂಡಿಮವಾ' ಗೀತೆಯನ್ನು ಯು ಟ್ಯೂಬ್‌ನಲ್ಲಿ ೨೫ ಲಕ್ಷಕ್ಕೂ ಹೆಚ್ಚು ಜನರು ವೀಕ್ಷಿಸಿದ್ದಾರೆ. ಭಾರತದಲ್ಲಿ ಅತೀ ಹೆಚ್ಚು ವೀಕ್ಷಿಸಿದ ಐದು ಗೀತೆಗಳಲ್ಲಿ ಇದು ಸಹ ಒಂದಾಗಿದೆ.

ಸತತವಾಗಿ ಏಳು ವರ್ಷಗಳ ಕಾಲ ಗಣರಾಜ್ಯೋತ್ಸವದಲ್ಲಿ ಸ್ತಬ್ಧಚಿತ್ರಗಳ ಮೂಲಕ ಭಾಗವಹಿಸಿದ ಏಕೈಕ ರಾಜ್ಯ ಎನ್ನುವ ಹಿರಿಮೆಯನ್ನು ವಾರ್ತಾ ಇಲಾಖೆ ತನ್ನದಾಗಿಸಿಕೊಂಡಿದೆ.